

ವಿಧಿಸಬೇಕು. ಇಲ್ಲದಿದ್ದರೆ ಇಡೀ ದೇಶವನ್ನೇ ಇವರು ತಿಂದು ತೇಗಿಬಿಡುತ್ತಾರೆ...' ಹಿರಿಯರು ಗದ್ಗದಿತರಾಗಿ ಮಾತು ನಿಲ್ಲಿಸಿದ್ದರು. ಇದ್ದಕ್ಕಿದ್ದಂತೆ ಕೋರ್ಟಿನಲ್ಲಿ ನಗೆಯ ಅಲೆಯೆದ್ದಿತ್ತು.

'ಸೈಲೆಂಟ್...' ಅಮೀನ ನ್ಯಾಯಪೀಠದ ಪರವಾಗಿ ಎಚ್ಚರಿಸಿದ್ದ. ನಗು ಮಾಯವಾಗಿ ಕೋರ್ಟ್ ಹಾಲ್‌ನಲ್ಲಿ ನಿಶ್ಶಬ್ದ ನೆಲೆಗೊಂಡಿತ್ತು. ಈಗ ನಾಡಿನಲ್ಲೇ ನಂಬರ್ ಒನ್ ಎನಿಸಿರುವ ನ್ಯಾಯವಾದಿ ಎದ್ದು ನಿಂತು ಹಿರಿಯರು ಅಪಾದಿಸಿದ ಎಲ್ಲಾ ಕಕ್ಷಿದಾರರ ಪರವಾಗಿ ವಾದಿಸಲಾರಂಭಿಸಿದರು: 'ಮಹಾಸ್ವಾಮಿ ಈ ಹಿರಿಯರು ಇಡೀ ಸಂವಿಧಾನವನ್ನೇ ಅವಮಾನ ಮಾಡಿ ಮಾತನಾಡಿದ್ದಾರೆ. ಇವರು ಹೇಳಿದಂತೆ ಮಾಡಿದರೆ ದೇಶದ ಅಭಿವೃದ್ಧಿ ಚಟುವಟಿಕೆಗಳೇ ಸ್ತಬ್ಧವಾಗಿಬಿಡುತ್ತವೆ. ಈ ಹಿರಿಯರು ಅವಿವಾಹಿತರಾಗಿರುವ ಕಾರಣ ಹೆಂಡತಿ–ಮಕ್ಕಳು ಮುಂತಾದ ಜವಾಬ್ದಾರಿ ಇಲ್ಲದೆ ಇರುವುದರಿಂದ, ಉಪಯೋಗಕ್ಕೆ ಬಾರದ ಕೆಲಸಗಳಲ್ಲಿ ತೊಡಗಿಸಿಕೊಂಡು ಸಮಾಜದ ಸ್ವಾಸ್ಥ್ಯವನ್ನೇ ಹಾಳುಮಾಡುತ್ತಿದ್ದಾರೆ. ಇವರ ಮೇಲೆ ಅಗತ್ಯ ಕ್ರಮ ತೆಗೆದುಕೊಳ್ಳದೆ ಹೋದರೆ ಸಮಾಜದಲ್ಲಿ ಅನಗತ್ಯ ಸಂಘರ್ಷಗಳು ಉಂಟಾಗಬಹುದು. ಇವರ ಯಾವ ಹೇಳಿಕೆಯೂ ಸಾಕ್ಷ್ಯಾಧಾರಗಳಿಂದ ಕೂಡಿಲ್ಲದಿರುವುದರಿಂದಲೂ ಘನ ನ್ಯಾಯಪೀಠವು ಈಗಿಂದೀಗಲೇ ಈ ಪ್ರಕರಣವನ್ನು ಮುಕ್ತಾಯಗೊಳಿಸಬೇಕಾಗಿ ನನ್ನ ಕಕ್ಷಿದಾರರ ಪರವಾಗಿ ವಿನಂತಿಸಿಕೊಳ್ಳುತ್ತೇನೆ'. ನ್ಯಾಯಪೀಠಕ್ಕೆ ಅದೇನನ್ನಿಸಿತೋ, 'ಪ್ರಕರಣವನ್ನು ಮುಂದೂಡಲಾಗಿದೆ' ಎಂದು ಘೋಷಿಸಿತು.

ಅಮೀನ ಈಗ ಗಟ್ಟಿಯಾಗಿ ಹೇಳಿದ: 'ಈಗ ಐದನೇ ಪ್ರಕರಣ ಮತ್ತು ನ್ಯಾಯಪೀಠಕ್ಕೆ ಮೈ ಹುಷಾರಿಲ್ಲದ ನಿಮಿತ್ತ ಇವೊತ್ತಿನ ಕೊನೆಯ ಪ್ರಕರಣ ಕೂಡ. ಮಾಮೂಲಿಯಾಗಿ ನಾಳೆ ನಾಡಿದ್ದು ರಜಾ ಕಾರಣದಿಂದಾಗಿ ನ್ಯಾಯಾಲಯವೂ ಮುಚ್ಚಲ್ಪಟ್ಟಿರುತ್ತದೆ...'

ಅಮೀನನ ಮಾತು ಮುಗಿಯುತ್ತಿದ್ದಂತೆ ನಡು ವಯಸ್ಸಿನ ದಂಪತಿಗಳಿಬ್ಬರು ಎದ್ದು ನಿಂತರು. ಮೂಲೆಯಲ್ಲಿ ನಿಂತಿದ್ದ ಅವಳು ದಂಪತಿಗಳನ್ನು ನೋಡಿ ಮಿಟ್ಟು ಬಿದ್ದಿದ್ದಳು. ಅವರು ತನ್ನನ್ನು ಹೆತ್ತು ಬೆಳೆಸಿದ ತಂದ ತಾಯಿ! ನ್ಯಾಯಪೀಠದ ಮುಂದೆ ಇಬ್ಬರೂ ತಲೆಬಾಗಿ, ಕೈ ಮುಗಿದು ಹೇಳತೊಡಗಿದರು:

'ಅಯ್ಯಾ, ನನ್ನ ಹದಿನೆಂಟು ವಯಸ್ಸಿನ ಒಬ್ಬಳೇ ಮುದ್ದಿನ ಮಗಳನ್ನು ಮೂರು ತಿಂಗಳ ಹಿಂದೆ ಸಾರ್ವಜನಿಕ ಸ್ಥಳದಲ್ಲಿಯೇ ಎಳೆಂಟು ಜನ ಸಾಮೂಹಿಕ ಅತ್ಯಾಚಾರ ಮಾಡಿದರು. ಅಂದಿನಿಂದ ನನ್ನ ಮಗಳು ಕಾಣೆಯಾಗಿದ್ದಾಳೆ. ಅತ್ಯಾಚಾರ ಮಾಡಿದವರು ಇದೋ ಈ ನ್ಯಾಯಾಲಯದಲ್ಲಿಯೇ ರಾಜಾರೋಷವಾಗಿ ನಿಂತಿದ್ದಾರೆ. ದಯವಿಟ್ಟು ನಮಗೆ ನ್ಯಾಯ ಕೊಡಿಸಿ'. ಅವರ ಮಾತುಗಳನ್ನು ಕೇಳಿ ಕೋರ್ಟಿನಲ್ಲಿ ನಿಂತಿದ್ದ ಅಪರಾಧಿ ಸ್ಥಾನದಲ್ಲಿದ್ದವರು ಒಬ್ಬರನ್ನೊಬ್ಬರು ನೋಡಿಕೊಂಡರು. ನಾಲ್ಕನೇ ಕೇಸಿನ ವಕಾಲತ್ತು ವಹಿಸಿದ್ದ ನ್ಯಾಯವಾದಿಯೇ ಮುಂದೆ ಬಂದು, 'ನ್ಯಾಯಮೂರ್ತಿಗಳೇ, ಇವರಿಗೆ ಯಾರೋ ದುಡ್ಡು ಕೊಟ್ಟು ನಮ್ಮ ಕಕ್ಷಿದಾರರ ಮೇಲೆ ಕೇಸು ಹಾಕಿಸಿದ್ದಾರೆ. ಇವರಿಗೆ ಮಕ್ಕಳೇ ಇಲ್ಲವೆಂದು ಇವರ ಏರಿಯಾದ ಕಾರ್ಪೊರೇಟರ್ ನೀಡಿರುವ ದೃಢೀಕರಣ ಪತ್ರ ಇಲ್ಲಿದೆ. ಅಲ್ಲದೆ ಅತ್ಯಾಚಾರಕ್ಕೆ ಒಳಗಾದವರೂ ಮತ್ತು ಅತ್ಯಾಚಾರ ದೃಢಪಡಿಸುವ ವೈದ್ಯಕೀಯ ತಪಾಸಣೆಯ ದೃಢೀಕರಣ ಪತ್ರ ಎರಡೂ ಇಲ್ಲದಿರುವಾಗ...' ನ್ಯಾಯವಾದಿಗಳ ಮಾತುಗಳಿನ್ನೂ ಮುಗಿದಿರಲಿಲ್ಲ, ಕೋರ್ಟಿನ ಮೂಲೆಯಿಂದ 'ಯುವರ್ ಹಾನರ್...' ಎಂಬ ಗಟ್ಟಿ ಧ್ವನಿ ಮೊಳಗಿತ್ತು. ಅದು ಕೋರ್ಟಿನ ನಿಜವಾದ ಭಾಷೆ. ನ್ಯಾಯಪೀಠದ ಸಮೇತ ಕೋರ್ಟಿನಲ್ಲಿದ್ದವರೆಲ್ಲ ಆ ಕಡೆ ನೋಡಿದ್ದರು. ಮೂಲೆಯಲ್ಲಿ ನಿಂತಿದ್ದ ಅವಳು ನಗುತ್ತಾ ನ್ಯಾಯಪೀಠದ ಬಳಿ ನಡೆದಿದ್ದಳು.

'ಯಾರು ನೀನು...?' ನ್ಯಾಯಪೀಠ ಪ್ರಶ್ನಿಸಿತ್ತು.

'ನಾನು ಹೆಣ್ಣು, ಕಾಣುತ್ತಿಲ್ಲವೇ ಕಣ್ಣು...' ಗಹಗಹಿಸಿ ನಕ್ಕಳು.

'ಏನು ನಿನ್ನ ಫಿರ್ಯಾದು?' ನ್ಯಾಯಪೀಠ ಗಡುಸಾಗಿಯೇ ಪ್ರಶ್ನಿಸಿತ್ತು.

'ನನ್ನ ಗರ್ಭದಲ್ಲಿ ವಿಷ ಬೀಜ ಬಿತ್ತಿದ್ದಾರೆ. ಅವು ಲಕ್ಷಾಂತರ, ಕೋಟ್ಯಂತರ ಸಂಖ್ಯೆಯಲ್ಲಿ ಮೊಳಕೆಯೊಡೆಯುತ್ತಿವೆ. ನನ್ನ ಒಡಲಿನಲ್ಲಿ ಭರಿಸಲಾರದಷ್ಟು ಸಂಕಟ...'

'ಅಂಥ ಗರ್ಭಕ್ಕೆ ಕಾರಣ ಯಾರು?' ನ್ಯಾಯಪೀಠದ ಬದಲು ನ್ಯಾಯಮೂರ್ತಿಯೊಬ್ಬ ಪ್ರಶ್ನಿಸಿದ್ದನೀಗ, ಅವಳನ್ನು ಗೊಂದಲಕ್ಕೆ ಕೆಡವಲು.

'ಮುಖವಿದ್ದವರು, ಮುಖವಿಲ್ಲದವರು, ಮುಖವಿದ್ದೂ ಮುಖವಾಡ ತೊಟ್ಟವರು...' ಅವಳು ಖಡಕ್ಕಾಗಿಯೇ ನುಡಿದಳು.

'ಅದರಲ್ಲಿ ನೀನೂ ಭಾಗಿಯಾಗಿರುವೆ' ನ್ಯಾಯವಾದಿ ಸವಾಲು ಎಸೆದಿದ್ದ .

'ಹೇಗೆ?' ಪ್ರಶ್ನಿಸಿದ್ದಳು ಅವಳು.

'ಯುವರ್ ಹಾನರ್, ಇವಳು ವ್ಯಭಿಚಾರಿಯಿರಬೇಕು. ಗರ್ಭ ಧರಿಸಬೇಕಾದರೆ ಗಂಡು–ಹೆಣ್ಣು ಇಬ್ಬರೂ ಸುಖ ಪಡುತ್ತಾರೆ. ಇತ್ತೀಚಿನ ಅಧ್ಯಯನವೊಂದು ಏನು ಹೇಳುತ್ತದೆಂದರೆ, ರೇಪ್ ನಡೆಯುವ ಸಂದರ್ಭದಲ್ಲಿ ಹೆಣ್ಣಿನ ಮನಸ್ಸು ಪ್ರತಿರೋಧ ವ್ಯಕ್ತಪಡಿಸುತ್ತಿದ್ದರೂ ದೇಹ ಲೈಂಗಿಕ ಕ್ರಿಯೆಗೆ ಸ್ಪಂದಿಸುತ್ತದಂತೆ. ಸೋ, ಹೆಣ್ಣು ದೇಹ ಅತ್ಯಾಚಾರಕ್ಕೆ ಒಪ್ಪಿಗೆ ನೀಡುತ್ತದೆಯೆಂದೇ ಅರ್ಥ'. ನ್ಯಾಯವಾದಿ ಪ್ರಚಂಡ ಬುದ್ಧಿವಂತ.

'ಏನು ನಿನ್ನ ಬೇಡಿಕೆ?' — ಈಗ ನ್ಯಾಯಪೀಠ ಶಾಂತವಾಗಿಯೇ ಅವಳನ್ನು ಪ್ರಶ್ನಿಸಿತ್ತು.

'ನ್ಯಾಯಪೀಠ ನನಗೆ ಗರ್ಭಪಾತ ಮಾಡಿಸಬೇಕು'. ಅವಳು ಗಟ್ಟಿ ಗುಂಡಿಗೆಯವಳು.

'ಅದು ನ್ಯಾಯಪೀಠದ ಕೆಲಸವಲ್ಲ'. ನ್ಯಾಯಪೀಠ ಖಡಾಖಂಡಿತವಾಗಿ ಹೇಳಿತು. ಈಗ ಅವಳು ನ್ಯಾಯಮೂರ್ತಿಗಳ ಮುಂದೆ ಟೇಬಲ್ ಮೇಲಿದ್ದ ನ್ಯಾಯಪೀಠದ ಆಯುಧವನ್ನು ಕೈಗೆತ್ತಿಕೊಂಡಳು! ವಜ್ರ ವೈಢೂರ್ಯಗಳಿಂದ ತಯಾರಿಸಿದ ಚೂಪಾದ ಕತ್ತಿ. ಎಂಥ ಅನ್ಯಾಯವನ್ನಾದರೂ ಕ್ಷಣಾರ್ಧದಲ್ಲಿ ಕತ್ತರಿಸಿ ಬಿಸಾಡುವಂಥ ಶಕ್ತಿಯುಳ್ಳ ಆಯುಧ. ಅರೆ, ಅದನ್ನು ನ್ಯಾಯದೇವತೆ ಅರ್ಥಾತ್ ನ್ಯಾಯಮೂರ್ತಿಗಳು ಅರ್ಥಾತ್ ನ್ಯಾಯಪೀಠ ಅರ್ಥಾತ್ ನ್ಯಾಯಾಧೀಶರು ಬಿಟ್ಟರೆ ಬೇರೆ ಯಾರೂ ಮುಟ್ಟುವಂತಿಲ್ಲ. ಎಲ್ಲರೂ ನೋಡನೋಡುತ್ತಿರುವಂತೆಯೇ ಅವಳು ನ್ಯಾಯಪೀಠದ ಆಯುಧದಿಂದ ತನ್ನ ಹೊಟ್ಟೆಯನ್ನು ಸೀಳಿಕೊಂಡಿದ್ದಳು. ಕ್ಷಣದಲ್ಲೇ ಅವಳ ಹೊಟ್ಟೆಯೊಳಗಿಂದ ಸಾವಿರಾರು ವಿಚಿತ್ರ ಜಂತುಗಳು ಹೊರ ಬಂದು ಕೋರ್ಟ್ ಹಾಲ್‌ನಲ್ಲಿ ಹರಿದಾಡಿದವು. ಅವುಗಳಲ್ಲಿ ಕೆಲವು ದೊಡ್ಡ ಜಂತುಗಳಾಗಿ ಬೆಳೆದು ಅಪರಾಧ ಸ್ಥಾನದಲ್ಲಿದ್ದ ಕಕ್ಷಿದಾರರನ್ನು, ಅವರ ಪರ ವಾದಿಸುತ್ತಿದ್ದ ನ್ಯಾಯವಾದಿಗಳನ್ನು ಅನಾಯಾಸವಾಗಿ ನುಂಗಿ ಹಾಕಿದವು. ಇಡೀ ನ್ಯಾಯಭವನದಲ್ಲಿ ಹಾಹಾಕಾರ ಉಂಟಾಗಿ ನ್ಯಾಯಪೀಠದ ಸಮೇತ ಎಲ್ಲರೂ ನ್ಯಾಯಭವನವನ್ನು ಬಿಟ್ಟು ದಿಕ್ಕಾಪಾಲಾಗಿ ಓಡುತ್ತಿದ್ದರು. ಕೋರ್ಟ್ ಹಾಲ್‌ನಿಂದ ತಪ್ಪಿಸಿಕೊಂಡು ಬಂದ ಜಂತುವೊಂದು ಬಾಗಿಲಲ್ಲಿ ನಿಂತಿದ್ದ ಕಾವಲುಗಾರನನ್ನು ನುಂಗಿಹಾಕಿತ್ತು. ಕೋರ್ಟ್ ಹಾಲ್‌ನಲ್ಲಿ ಈಗ ಭೀಕರ ಮೌನ ತಾಂಡವಾಡುತ್ತಿತ್ತು. ಆ ಮೌನದಾಳದಿಂದ, 'ಯುವರ್ ಹಾನರ್... ಯುವರ್ ಹಾನರ್...' ಎಂಬ ಪ್ರತಿಧ್ವನಿ ಮೊಳಗತೊಡಗಿತು.